**ಓ ಎಸ್ ನಂಃ327/2018**

**ಡಿ. ಡಬ್ಲ್ಯೂ ಃ 1**

**ದಿಃ 21.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎನ್ ಎಸ್ ವಕೀಲರಿಂದಃ**

ನಾನು 9 ನೆ ತರಗತಿಯವರೆಗೆ ಓದಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳೆಲ್ಲ ನನಗೆ ಗೊತ್ತು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯನ್ನು ನಮ್ಮ ವಕೀಲರು ತಯಾರಿಸಿದ್ದಾರೆ. ಈ ದಾವೆಯನ್ನು ಸುಶೀಲಮ್ಮ ಹೂಡಿದ್ದಾರೆ. ವಾದಿಯವರ ಹೆಸರು ನನಗೆ ನೆನಪಿಲ್ಲ. ದಾವೆಯನ್ನು ಭಾಗಾಂಶ ಕೋರಿ ಹೂಡಿದ್ದಾರೆ. ವಾದಿಯರು ಅವರ ಅಣ್ಣನ ಮಕ್ಕಳ ವಿರುದ್ದ ವಿಭಾಗಕ್ಕಾಗಿ ದಾವೆ ಹೂಡಿದ್ದು, ನಾನು ಆಸ್ತಿ ಖರೀದಿಸಿ 30 ವರ್ಷಗಳಾಗಿವೆ. ನಾನು ಶ್ಯಾನುಬೋಗನಹಳ್ಳಿಯ ನಿವಾಸಿಯಾಗಿದ್ದೇನೆ. ವಾದಿ ಮತ್ತು ಪ್ರತಿವಾದಿಗಳ ವಿಚಾರಗಳೆಲ್ಲವು ನನಗೆ ಗೊತ್ತು.

ಮುದ್ದನರಸಿಂಹಯ್ಯನಿಗೆ ಎಷ್ಟು ಜನ ಪತ್ನಿಯರು ಮತ್ತು ಮಕ್ಕಳೆಂದು ನನಗೆ ಗೊತ್ತಿಲ್ಲ. ನರಸಮ್ಮನವರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತು. ನರಸಮ್ಮನವರ 4 ಜನ ಮಕ್ಕಳ ಮದ್ಯೆ ವಿಭಾಗವಾಗಿಲ್ಲ ವೆಂದರೆ ಸರಿಯಲ್ಲ. ಸಾಕ್ಷಿ ವಿಭಾಗವಾದ ನಂತರವೇ ನಾನು ಆಸ್ತಿ ಖರೀದಿಸಿದ್ದೆ ಎಂದು ಹೇಳುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಗಳ ಕ್ರಯಪತ್ರಕ್ಕೆ ನರಸಮ್ಮನ ಎಲ್ಲ ಮಕ್ಕಳು ರುಜು ಮಾಡಿಲ್ಲ ಎಂದರೆ ಸರಿ. ನರಸಮ್ಮನವರಿಗೆ ಸೇರಿದ ಆಸ್ತಿಗಳೆಲ್ಲವು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಟ್ಟು ಕುಟಂಬದ ಅಸ್ತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ವಿಭಾಗವಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇವೆ. ಸಾಕ್ಷಿಗೆ ಈಗ ತಾನು ಹಾಜರುಪಡಿಸಿರುವ ದಾಖಲಾತಿಗಳನ್ನು ತೋರಿಸಿ ಅದರಲ್ಲಿ ವಿಭಾಗವಾಗಿರುವ ದಾಖಲಾತಿಯನ್ನು ಕೇಳಿದಾಗ ಸಾಕ್ಷಿ ತನಗೆ ಯಾವುದೆ ದಾಖಲೆಗಳು ಎಂದು ತಿಳಿಯುವುದಿಲ್ಲ ಎಂದು ಹೇಳುತ್ತಾರೆ.

1ನೆ ಪ್ರತಿವಾದಿಯಿಂದ ಸ.ನ. 30 ನ್ನು 1998 ರಲ್ಲಿ 2 ಎಕರೆ ಆಸ್ತಿ ಖರೀದಿಸಿದ್ದೆ. ನರಸಿಂಹಮೂರ್ತಿರವರಿಂದ ಸ.ನಂ. 34 ನ್ನು 1995-96 ರಲ್ಲಿ 1 ಎಕರೆ 20 ಗುಂಟೆ ಮತ್ತು 20 ಗುಂಟೆಯನ್ನು ಖರೀದಿಸಿದ್ದೆ. 2001 ರಲ್ಲಿ ಸ.ನಂ. 30 ರಲ್ಲಿ 20 ಗುಂಟೆ ಖರೀದಿಸಿದ್ದೆ. 2 ಮತ್ತು 3ನೆ ಪ್ರತಿವಾದಿಗಳ ತಂದೆಗೆ ಮತ್ತು 1ನೆ ಪ್ರತಿವಾದಿ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗವಾಗದೆ ಇದ್ದರೂ ಕೂಡ ಒಟ್ಟು ಕುಟುಂಬದ ಆಸ್ತಿಯನ್ನು ಇತರೆ ಹಕ್ಕುದಾರರಿಗೆ

ಮೋಸ ಮಾಡುವ ಉದ್ದೇಶದಿಂದ ಕ್ರಯಕ್ಕೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಅವರ ಒಟ್ಟು ಕುಟುಂಬದ ಆಸ್ತಿಗಳ ವಿರುದ್ದ ದಾವೆ ಹೂಡಿದ್ದಾರೆ ಎದರೆ ಇರಬಹುದು. ವಾದಿಯರು ಹಾಕಿರುವ ಆಸ್ತಿಗಳ ವಿಸ್ತೀರ್ಣ ಮತ್ತು ಚೆಕ್ ಬಂದಿ ಸರಿ ಇದೆಯಾ ಎಂದರೆ ಸಾಕ್ಷಿ ನಮ್ಮ ಆಸ್ತಿ ಸರಿ ಇದೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 3 ರವರ ಜೊತೆ ಶಾಮೀಲಾಗಿ ವಾದಿಗಳಿಗೆ ಗೊತ್ತಿಲ್ಲದಂತೆ ಸುಳ್ಳು ಕ್ರಯಪತ್ರ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ವಿಳಾಸದಲ್ಲಿಯೇ ವಾಸವಾಗಿದ್ದೇನೆ. ಪ್ರತಿವಾದಿ 1 ರಿಂದ 3 ರವರು ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಕೂಡ ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ರಿಂದ 3 ರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಟಿ ಎನ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**